## ಪ್ರಥಮ ದರ್ಜೆಯ ನ್ಯಾಯಿಕ ದಂಡಾಧಿಕಾರಿಯವರ ನ್ಯಾಯಾಲಯ , ಕಾರವಾರ

ಸಿ.ಸಿ. ನಂಃ 140/2014 ಪಿ.ಡಬ್ಲ್ಯೂಃ 5

ಸಿಡಬ್ಲೂಃ 7

ಸಾಕ್ಷಿದಾರರ ಹೆಸರು : ಚಂದ್ರಕಾಂತ

ತಂದೆಯ ಹೆಸರು : ಮಹಾಬಳೇಶ್ವರ ಸಾಳುಂಕೆ

ವಯಸ್ಸು : 69 ವರ್ಷ

ಉದ್ಯೋಗ : ನಿವೃತ್ತ ಪ್ರ.ದ.ಸ.

ವಾಸ್ತವ್ಯ : ಸದಾಶಿವಗಡ , ಕಾರವಾರ

ಸತ್ಯ ಪ್ರತಿಜ್ಞೆಯ ಮೇರೆಗೆ ದಿನಾಂಕಃ 26-07-2022

**ಮುಖ್ಯ ವಿಚಾರಣೆಃ ಎ ಪಿ ಪಿ ಯವರಿಂದಃ**

ಚಾಸಾ.1 ನನ್ನ ಹೆಂಡತಿ. ದಿನಾಂಕಃ 27.03.2008 ರಂದು ನಾನು ಕಚೇರಿಯಲ್ಲಿದ್ದಾಗ ನನ್ನ ಹೆಂಡತಿ ಶಾಲೆಗೆ ಹೋಗಿದ್ದರು. ನನ್ನ ಹೆಂಡತಿ ಶಾಲೆಗೆ ಹೋಗಬೇಕಾದರೆ ಮನೆಯ ಬೀಗವನ್ನು ಹಾಕಿಕೊಂಡು ಹೋಗಿದ್ದರು. ನನ್ನ ಮಗ ಶಾಲೆಯಿಂದ ಮಧ್ಯಾಹ್ನ 1.00 ಗಂಟೆಗೆ ಮನೆಗೆ ಬಂದು ನೋಡಿದಾಗ ಮನೆಯ ಬೀಗ ತೆರೆಯಲಾಗಿತ್ತು , ಅದರ ಕೊಂಡಿಯನ್ನು ಒಡೆದು ಹಾಕಲಾಗಿತ್ತು , ಪೋಲೀಸರು ನನಗೆ ಕರೆ ಮಾಡಿ ನಡೆದ ಘಟನೆಯನ್ನು ತಿಳಿಸಿದರು. ಮನೆಯಲ್ಲಿ ಒಂದು ನೆಕಲೇಸ್ , ಎರಡು ಕರಿಮಣಿ ಬಳೆ , ಒಂದು ಸಾದಾ ಬಳೆ , ಒಂದು ಚೈನು , ಎರಡು ಉಂಗುರಗಳು, ಎರಡು ಕಿವಿಯೋಲೆ ಮತ್ತು ರೂ.9,500/- ನಗದು ಕಳುವು ಆಗಿತ್ತು. ಈ ಕುರಿತು ಚಾಸಾ.1 ರವರು ಪೋಲೀಸರಿಗೆ ದೂರನ್ನು ನೀಡಿದ್ದಾರೆ. ಈ ಕುರಿತು ನಾನು ಪೋಲೀಸರಿಗೆ ಹೇಳಿಕೆಯನ್ನು ನೀಡಿದ್ದೇನೆ. ಒಂದು ನೆಕಲೇಸ್ , ಒಂದು ಉಂಗುರ, ಎರಡು ಕಿವಿಯೋಲೆಗಳು ಸಿಕ್ಕಿದ್ದು , ಈಗ ನಾನು ಅವುಗಳನ್ನು ನ್ಯಾಯಾಲಯಕ್ಕೆ ತೆಗೆದುಕೊಂಡು ಬಂದಿದ್ದೇನೆ. ಅವುಗಳು ಚಾಸಾ.1 ರವರದ್ದು ಆಗಿರುತ್ತವೆ. ಈಗ ನ್ಯಾಯಾಲಯದ ಮುಂದಿರುವ ಮು ಮಾ 1 ನ್ನು ನೋಡಿ ಗುರುತಿಸುತ್ತೇನೆ. ಅದು ನಮ್ಮ ಮನೆಯದ್ದೇ ಆಗಿರುತ್ತದೆ.

**(ಈ ಹಂತದಲ್ಲಿ ಎಪಿಪಿ ರವರು ಸಾಕ್ಷಿಯನ್ನು ಭಾಗಶಃ ಪ್ರತಿಕೂಲ ಸಾಕ್ಷಿ ಎಂದು ಪರಿಗಣಿಸಿ ಪಾಟೀ ಸವಾಲು ಮಾಡಲು ಅನುಮತಿ ಕೋರಿದ್ದು , ಅನುಮತಿ ನೀಡಲಾಯಿತು)**

**ಪಾಟೀ ಸವಾಲುಃ ಎಪಿಪಿ ರವರಿಂದ**

2. ದಿನಾಂಕಃ 27.03.2008 ರಂದು ಬೆಳಿಗ್ಗೆ 8 ಗಂಟೆಗೆ ನಾನು ಕರ್ತವ್ಯಕ್ಕೆ ಹೋಗಿದ್ದು , ನಂತರ ನನ್ನ ಮಗ ರಾಹುಲ್ 8.45 ಗಂಟೆಗೆ ಶಾಲೆಗೆ ಹೋಗಿದ್ದು , ಹಾಗೆಯೇ ನನ್ನಹೆಂಡತಿ ಚಾಸಾ.1– 9 ಗಂಟೆಗೆ ಶಾಲೆಗೆ ಕರ್ತವ್ಯಕ್ಕೆ ಹೋಗುತ್ತಾ , ನಂತರ ನನ್ನ ಮಗ ಶಾಲೆ ಬಿಟ್ಟು ಮಧ್ಯಾಹ್ನ 2 ಗಂಟೆಗೆ ಮನೆಗೆ ಬಂದಾಗ ಮನೆಯ ಮುಂದಿನ ಬಾಗಿಲದ ಚಿಲಕದ ಕೊಂಡಿ ಮುರಿದು ಕುಲುಪು ಕೆಳಗೆ ಬಿದ್ದಿದ್ದು , ಆತನು ಮನೆಯ ಒಳಗೆ ಹೋಗಿ ನೋಡಲಾಗಿ ಬೆಡ್ ರೂಮ್ ನಲ್ಲಿದ್ದ ಎರಡು ಆಲ್ಮೇರಾದ ಬಾಗಿಲು ತೆರೆದಿದ್ದು , ಅದರಲ್ಲಿದ್ದ ಬಟ್ಟೆ ಮತ್ತು ಇತರೇ ವಸ್ತುಗಳೆಲ್ಲಾ ಚೆಲ್ಲಾಪಿಲ್ಲಿಯಾಗಿ ಹರಡಿ ಬಿದ್ದಿರುವುದನ್ನು ನೋಡಿ ವಿಷಯವನ್ನು ನನ್ನ ಮಗ ನನ್ನ ತಾಯಿಯ ಶಾಲೆಯ ಹತ್ತಿರ ಹೋಗಿ ತಿಳಿಸಿದ್ದು , ಹಾಗೇ ಚಾಸಾ.1 ಮನೆಯ ಹತ್ತಿರ ಬಂದು ನೋಢಿ ನನಗೆ ಫೋನ್ ಮಾಡಿ ನಮ್ಮ ಮನೆಯನ್ನು ಯಾರೋ ಕಳ್ಳರು ಕಳುವು ಮಾಡಿಕೊಂಡು ಹೋದ ಬಗ್ಗೆ ತಿಳಿಸಿದಂತೆ ಕೂಡಲೇ ನಾನು ಮನೆಗೆ ಬಂದು ನೋಡಲಾಗಿ, ಎರಡು ಬೆಡ್ ರೂಮನಲ್ಲಿದ್ದ ಅಲ್ಮೇರಾದ ಬಾಗಿಲು ತೆರೆದಿದ್ದು , ಅದರಲ್ಲಿದ್ದ ಬಟ್ಟೆ ಮತ್ತು ಇತರೇ ವಸ್ತುಗಳು ಹರಡಿ ಬಿದ್ದದ್ದು , 2 ನೇ ಬೆಡ್ ರೂಮನಲ್ಲಿದ್ದ ಆಲ್ಮೇರಾದ ಒಳಗೆ ಇದ್ದ ಸ್ಪೆಷಲ್ ಲಾಕರನಲ್ಲಿಟ್ಟಿದ್ದ ಬಂಗಾರದ ಒಡವೆಗಳು ಮತ್ತು ನಗದು ಹಣ ಇರಲಿಲ್ಲವಾಗಿತ್ತು , ಯಾರೋ ಆರೋಪಿತರು ದಿನಾಂಕಃ 27.03.2008 ರಂದು ಬೆಳಿಗ್ಗೆ 9 ರಿಂದ ಮಧ್ಯಾಹ್ನ 2.00 ಗಂಟೆಯ ನಡುವಿನ ಅವಧಿಯಲ್ಲಿ ನಮ್ಮ ಮನೆಯ ಮುಂದಿನ ಬಾಗಿಲದ ಚಿಲಕದ ಕೊಂಡಿಯನ್ನು ಮುರಿದು ಮನೆಯೊಳಗೆ ಪ್ರವೇಶಿಸಿ ಅಲ್ಮೇರಾದಲ್ಲಿಟ್ಟಿದ್ದ ಬಂಗಾರದ ಒಡವೆಗಳು ಮತ್ತು ನಗದು ಹಣವನ್ನು ಕಳುವು ಮಾಡಿಕೊಂಡು ಹೋಗಿರುತ್ತಾರೆ ಎಂದರೆ ಸರಿ.

3. ದಿನಾಂಕಃ 02.12.2008 ರಂದು ನಾನು ದಿನಾಂಕ 27.03.2008 ರಂದು ನಮ್ಮ ಮನೆಯೊಳಗಿದ್ದ ಬಂಗಾರದ ಒಡವೆ ಮತ್ತು ಹಣವನ್ನು ಕಳುವು ಮಾಡಿಕೊಂಡು ಹೋದ ಆರೋಪಿತನಿಗೆ ದಸ್ತಗಿರಿ ಮಾಡಿದ ಬಗ್ಗೆ ತಿಳಿಸಿದಂತೆ ನಾನು ಚಿತ್ತಾಕುಲಾ ಪೋಲೀಸ ಠಾಣೆಗೆ ಬಂದು ಆತನನ್ನು ನೋಡಿದೆ ಎಂದರೆ ಸರಿ.

**ಪಾಟೀ ಸವಾಲುಃ ಶ್ರೀ ಪಿ ಬಿ ಟಿ ಆರೋಪಿ ಪರ ವಕೀಲರಿಂದ**

**4.** ನನ್ನ ಅಥವಾ ನನ್ನ ಮನೆಯವರ ಗೈರು ಹಾಜರಾತಿಯಲ್ಲಿ ಮನೆಗೆ ಯಾರು ಬಂದರು ಅಥವಾ ಹೋದರು ಎನ್ನುವುದು ನನಗೆ ಗೊತ್ತಾಗುವುದಿಲ್ಲ ಎಂದರೆ ಸರಿ. ನಡೆದ ಘಟನೆಯನ್ನು ನಾನು ಕಣ್ಣಾರೆ ನೋಡಿಲ್ಲಾ ಎಂದರೆ ಸಾಕ್ಷಿಯು ಪೋಲೀಸರು ಘಟನಾ ಸ್ಥಳ ತೋರಿಸಿದ್ದಾರೆಂದು ನುಡಿಯುತ್ತಾರೆ. ಕಳುವಾದ ಹಣದ ಮುಖಬೆಲೆ ನನಗೆ ಹೇಳಲು ಬರುವುದಿಲ್ಲಾ. ಚಾಸಾ.1 ರವರಿಗೆ ಸಹಾಯ ಮಾಡುವ ಉದ್ದೇಶದಿಂದ

ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ. ಕಳ್ಳತನಕ್ಕೂ ಮತುತ ಆರೋಪಿತನಿಗೂ ಯಾವುದೇ ಸಂಬಂಧ ಇಲ್ಲಾ ಎಂದರೆ ಸರಿಯಲ್ಲ. ನಮ್ಮ ಮನೆ ಯಾವತ್ತೂ ಕಳ್ಳತನ ಅಗಿದ್ದು ಇಲ್ಲಾ , ಈ ಕುರಿತು ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ. ಪ್ರಕಾಶ ಪಾಟೀಲ ಎಂಬುವವರು ನನ್ನ ಜೊತೆ ಇನ್ನೊಬ್ಬ ವ್ಯಕ್ತಿ ಇದ್ದ ಅವನ ಹೆಸರು ದೀಪಕ ಲಲಿತಕುಮಾರ ಗುರು ಎಂದು ತಿಳಿಸಿದನು. ಆರೋಪಿತ ನನ್ನ ಮುಂದೆ ಯಾವುದೇ ಹೇಳಿಕೆ ನೀಡಿಲ್ಲಾ ಎಂದರೆ ಸರಿಯಲ್ಲ.

**ಮರು ವಿಚಾರಣೆಃ – ಇಲ್ಲಾ –**

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತ ಲೇಖನದಂತೆ ಗಣಕೀಕೃತ ಮಾಡಿಸಲಾಯಿತು.

ಓ. ಹೇ.ಕೇ. ಸರಿ ಇದೆ.

**ಪ್ರ.ದ.ನ್ಯಾದಂ. ಕಾರವಾರ**